# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 810 |
| ಉತ್ತರಿಸುವ ದಿನಾಂಕ | 21-02-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರವು ಇತ್ತೀಚೆಗಷ್ಟೆ ಕಾವೇರಿ-2 ತಂತ್ರಾಂಶವನ್ನು ಬಿಡುಗಡೆ ಮಾಡಿದ್ದು, ಪ್ರತಿ ನಿತ್ಯ ಕಾವೇರಿ-2 ಸರ್ವರ್ ತೊಂದರೆಯಾಗಿ ಸಾರ್ವಜನಿಕರು ಸಕಾಲದಲ್ಲಿ ತಮ್ಮ ದಾಖಲೆಗಳನ್ನು ಪಡೆಯಲು ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೋಂದಣಿ ವ್ಯವಸ್ಥೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಇಲಾಖೆಯು ಕಾವೇರಿ-2.0 ತಂತ್ರಾಂಶವನ್ನು ಜಾರಿಗೆ ತಂದಿರುತ್ತದೆ. ಈ ತಂತ್ರಾಂಶವು ಸರಳ, ಸುಲಲಿತ ಹಾಗೂ ನಾಗರೀಕ ಸ್ನೇಹಿ ತಂತ್ರಾಂಶವಾಗಿರುತ್ತದೆ. ಈ ತಂತ್ರಾಂಶವನ್ನು ಜೂನ್ 2023 ರಲ್ಲಿ ರಾಜ್ಯದ ಎಲ್ಲಾ ಉಪ ನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ ಸಾರ್ವಜನಿಕರ ಪಾತ್ರ ಹೆಚ್ಚಾಗಿದ್ದು, ನೋಂದಣಿಗೆ ಸಂಬಂಧಿಸಿದ ಶೇ.90ರಷ್ಟು ಕೆಲಸವನ್ನು ಉಪ ನೋಂದಣಿ ಕಛೇರಿಗೆ ಭೇಟಿ ನೀಡುವ ಮೊದಲೆ ಪೂರ್ಣಗೊಳಿಸಿರುತ್ತಾರೆ. ಋಣಭಾರ ಪ್ರಮಾಣಪತ್ರ ಹಾಗೂ ಧೃಢೀಕೃತ ನಕಲು ಪ್ರತಿಗಳನ್ನು ಉಪ ನೋಂದಣಿ ಕಛೇರಿಗೆ ಭೇಟಿ ನೀಡದೆ ಆನ್‌ಲೈನ್ ಮುಖಾಂತರ ಪಡೆಯಬಹುದಾಗಿದೆ.<br><br>ಈ ತಂತ್ರಾಂಶವು ಈ ಹಿಂದೆ ಇದ್ದ ವ್ಯವಸ್ಥೆಗಿಂತ ವಿಭಿನ್ನವಾಗಿರುವುದರಿಂದ ಹಾಗೂ ಸಾರ್ವಜನಿಕರ ಪಾತ್ರ ಹೆಚ್ಚಾಗಿರುವುದರಿಂದ ಪ್ರಾರಂಭದ ದಿನಗಳಲ್ಲಿ ಸಾರ್ವಜನಿಕರಿಗೆ ಸೇವೆಗಳನ್ನು ಪಡೆಯಲು ತೊಂದರೆ ಉಂಟಾಗಿದ್ದು, ಅವುಗಳನ್ನು ವ್ಯವಸ್ಥಿತವಾಗಿ ಪರಿಹರಿಸಲಾಗಿರುತ್ತದೆ. |
| ಆ | ಮುಂದುವರೆದ ತಂತ್ರಜ್ಞಾನ ಯುಗದಲ್ಲಿಯೂ ಈ ರೀತಿ ಸರ್ವರ್ ಸಮಸ್ಯೆ ಉಂಟಾಗುತ್ತಿರುವುದನ್ನು ಈವರೆವಿಗೂ ನಿವಾರಿಸಲು ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು; ಇನ್ನು ಎಷ್ಟು ಅವಧಿಯವರೆಗೆ ಜನಸಾಮಾನ್ಯರು ಸರ್ವರ್ ಸಮಸ್ಯೆಯನ್ನು ಎದುರಿಸಬೇಕಾಗಿದೆ; | ಕಾವೇರಿ-2.0 ತಂತ್ರಾಂಶದಲ್ಲಿ ಸ್ಟೇಟ್ ಡೇಟಾ ಸೆಂಟರ್‌ನಲ್ಲಿ ಒಂದೇ ಒಂದು ಕೇಂದ್ರೀಕೃತ ಸರ್ವರ್ ಇರುತ್ತದೆ. ಈ ತಂತ್ರಾಂಶದ ಸರ್ವರ್‌ನಲ್ಲಿ ಸಮಸ್ಯೆ ಉಂಟಾದಲ್ಲಿ ಅವುಗಳನ್ನು ಕೂಡಲೇ ಪರಿಹರಿಸಲಾಗುತ್ತಿದೆ.<br><br>ಈ ತಂತ್ರಾಂಶದಲ್ಲಿ ಎಂದಿನಂತೆ ದಸ್ತಾವೇಜುಗಳು ನೋಂದಣಿಯಾಗುತ್ತಿದ್ದು, ಈ ಹಿಂದೆ ಇದ್ದ ತಂತ್ರಾಂಶಕ್ಕಿಂತ ಹೆಚ್ಚು ದಸ್ತಾವೇಜುಗಳು ಪ್ರತಿನಿತ್ಯ ನೋಂದಣಿಯಾಗುತ್ತಿದೆ. |
| ಇ | ಪ್ರತಿ ಒಂದಕ್ಕೂ ಆನ್‌ಲೈನ್ ವ್ಯವಸ್ಥೆ ಮಾಡಿರುವುದರಿಂದ ಸಾರ್ವಜನಿಕರಿಗೆ ಹಾಗೂ ರೈತರಿಗೆ ಬಹಳಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾವೇರಿ-2.0 ತಂತ್ರಾಂಶದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಹಾಗೂ ನೋಂದಣಿ ವ್ಯವಸ್ಥೆಯಲ್ಲಿ ಪ್ರಸ್ತುತ ಇರುವ ಸಮಸ್ಯೆಗಳು ಪರಿಹರಿಸಲು ಎಲ್ಲಾ ಸೇವೆಗಳಿಗೆ ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯು ಸರಳೀಕೃತ, ಸುಲಲಿತ ಹಾಗೂ |

| | | |
|---|---|---|
| | | ಜನಸ್ನೇಹಿಯಾಗಿರುತ್ತದೆ ಮತ್ತು ಮಾಹಿತಿ ತಂತ್ರಜ್ಞಾನದ ಮೂಲಕ ಉತ್ತಮ ಆಡಳಿತವನ್ನು ನೀಡುವಲ್ಲಿ ಒಂದು ಹೆಜ್ಜೆಯಾಗಿರುತ್ತದೆ. ಉಪ ನೋಂದಣಿ ಕಛೇರಿಗಳಲ್ಲಿ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಅನುಭವಿಸುವ ವಿಳಂಬ ಹಾಗೂ ಭ್ರಷ್ಟಾಚಾರವನ್ನು ತಡೆಗಟ್ಟುವ ಉದ್ದೇಶದಿಂದ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿರುತ್ತದೆ. ಅಲ್ಲದೆ ಕೃಷಿ ಸಾಲಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಬ್ಯಾಂಕುಗಳು ಫ್ರೂಟ್ಸ್ ತಂತ್ರಾಂಶದಿಂದ ಆನ್‌ಲೈನ್ ಮುಖಾಂತರ ಕಾವೇರಿ -2.0 ತಂತ್ರಾಂಶಕ್ಕೆ ಕಳುಹಿಸಿ ಫೈಲಿಂಗ್ ಮಾಡಲಾಗುತ್ತಿದೆ. ಇದರಿಂದಾಗಿ ರೈತರು ಕೃಷಿ ಸಾಲದ ದಸ್ತಾವೇಜುಗಳ ನೋಂದಣಿಗಾಗಿ ಉಪ ನೋಂದಣಿ ಕಛೇರಿಯನ್ನು ಭೇಟಿ ಮಾಡುವ ಅವಶ್ಯಕತೆ ಇರುವುದಿಲ್ಲ. |
| ಈ | ಒಂದು ಇ.ಸಿ.ಪಡೆಯಲು ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕಾದರೆ, ಅಪ್‌ಲೋಡ್ ಮಾಡುವ ಖಾಸಗಿ ಅಂಗಡಿಯವರಿಗೆ ರೂ.200/- ರೂಪಾಯಿಗಳನ್ನು ನೀಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ಸರಿಪಡಿಸಲು, ನೋಂದಣಾಧಿಕಾರಿಗಳ ಕಛೇರಿಯಲ್ಲಿ ಉಚಿತವಾಗಿ ಅಪ್‌ಲೋಡ್ ಮಾಡುವ ವ್ಯವಸ್ಥೆ ಮಾಡಲು ಸರ್ಕಾರದಿಂದ ಯಾವುದಾದರೂ ಕಾರ್ಯಕ್ರಮ ರೂಪಿಸಲಾಗಿದೆಯೇ? | ಉಪ ನೋಂದಣಿ ಕಛೇರಿಗಳಲ್ಲಿ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಯಾವುದೇ ಮೂರನೇ ವ್ಯಕ್ತಿಯನ್ನು ಅವಲಂಬಿಸದೆ ತಾವೇ ಸ್ವತಃ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸೇವೆಗಳನ್ನು ಪಡೆಯಲು ಕಾವೇರಿ-2.0 ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಾವೇರಿ-2.0 ತಂತ್ರಾಂಶದಲ್ಲಿ ಋಣಭಾರ ಪ್ರಮಾಣ ಪತ್ರ ಪಡೆಯುವುದು ಬಹಳ ಸುಲಭವಾಗಿದ್ದು, ಯಾವುದೇ ಖಾಸಗಿ ವ್ಯಕ್ತಿಯನ್ನು ಅವಲಂಬಿಸುವ ಅವಶ್ಯಕತೆ ಇರುವುದಿಲ್ಲ. |

ಕಂಇ/30/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು